		ಮನಾಬಾದ	ಬ್ಯಾರೇಜ ಕಂ ಬ್ರಿಡ್ಜ ನಿರ್ಮಾಣ	
50	ಬೀದರ	ಹುಮನಾಬಾದ/ಹುಮನಾಬಾದ	ನಿಂಬೂರ ಗ್ರಾಮದ ಹತ್ತಿರ ಬ್ಯಾರೇಜ ಕಂ ಬ್ರಿಡ್ಜ ನಿರ್ಮಾಣ	150.00
			ಒಟ್ಟು	**250.00**

ಕರ್ನಾಟಕ ವಿಧಾನ ಸಭೆ

180 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ

ಶ್ರೀ ಬಸವರಾಜ ಬೊಮ್ಮಾಯಿ(ಜಲ ಸಂಪನ್ಮೂಲ ಸಚಿವರು)

ಅ) ಬೀದರ್ ಜಿಲ್ಲೆಯಲ್ಲಿ ಯಾವ ಯಾವ ನೀರಾವರಿ ಯೋಜನೆಗಳು ಪೂರ್ಣಗೊಂಡಿವೆ ಹಾಗೂ ಯಾವ ಯೋಜನೆಗಳು ಅಪೂರ್ಣವಾಗಿವೆ, ಅಪೂರ್ಣವಾಗಿರುವ ಯೋಜನೆಗಳು ಅನುಷ್ಠಾನಗೊಳ್ಳಲು ಇನ್ನೂ ಎಷ್ಟು ಸಮಯದ ಅಗತ್ಯವಿದೆ.

ಬೀದರ್ ಜಿಲ್ಲೆಯಲ್ಲಿ 1. ಕಾರಂಜಾ 2. ಚುಳಕಿನಾಲಾ 3. ಮುಲ್ಲಾಮಾರಿ ಮೇಲ್ದಂಡೆ ಯೋಜನೆ ಹಾಗೂ 4. ಮಾಂಜ್ರಾ ನದಿಗೆ ಅಡ್ಡಲಾಗಿ ಜೀರಿಗಿಹಾಳ್, ಮಣೀಕೇಶ್ವರ್, ಚಂದಾಪುರ ಮತ್ತು ಹಾಲಹಳ್ಳಿ ಇವುಗಳ ಬಳಿ ನಾಲ್ಕು ಬ್ಯಾರೇಜುಗಳನ್ನು ನಿರ್ಮಿಸಲಾಗುತ್ತಿದೆ. ಇವುಗಳ ಪೈಕಿ ಚುಳಕಿನಾಲಾ ಹಾಗೂ ಮುಲ್ಲಾಮಾರಿ ಮೇಲ್ದಂಡೆ ಯೋಜನೆಯ ಕಾಮಗಾರಿಗಳು ಈಗಾಗಲೇ ಪೂರ್ಣಗೊಂಡಿರುತ್ತವೆ. ಕಾರಂಜಾ ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಎಲ್ಲಾ ಬಾಕಿ ಕಾಮಗಾರಿಗಳನ್ನು ಮಾರ್ಚ್ 2010ರಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ. ಮಾಂಜ್ರಾ ನದಿಗೆ ಅಡ್ಡಲಾಗಿ ನಿರ್ಮಿಸಲಾಗುತ್ತಿರುವ ನಾಲ್ಕು ಬ್ಯಾರೇಜ್‌ಗಳ ಪೈಕಿ ಚಂದಾಪುರ ಬ್ಯಾರೇಜನ್ನು ಡಿಸೆಂಬರ್ 2009ರ ಅಂತ್ಯಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ. ಉಳಿದ ಮೂರು ಬ್ಯಾರೇಜುಗಳನ್ನು 2010-2011ನೇ ಸಾಲಿನ ಅಂತ್ಯದಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಆ) ಜಿಲ್ಲೆಯಲ್ಲಿ ಅನುಷ್ಠಾನಗೊಂಡಿರುವ ಹಾಗೂ ಅಂತಿಮ ಹಂತದಲ್ಲಿರುವ ನೀರಾವರಿ ಯೋಜನೆಗಳ ಆರಂಭಿಕ ಅಂದಾಜು ವೆಚ್ಚ ಎಷ್ಟು ಹಾಗೂ ಇಲ್ಲಿಯವರೆವಿಗೆ ವೆಚ್ಚ ಮಾಡಲಾಗಿರುವ ಹಣದ ಮೊತ್ತವೆಷ್ಟು, (ಪ್ರತಿ ಯೋಜನೆಯ ಬಗ್ಗೆ ಪ್ರತ್ಯೇಕ ವಿವರಗಳನ್ನು ಒದಗಿಸುವುದು).

ಬೀದರ್ ಜಿಲ್ಲೆಯಲ್ಲಿ ಈಗಾಗಲೇ ಪೂರ್ಣಗೊಂಡಿರುವ ಯೋಜನೆಗಳಾದ 1. ಚುಳಕಿನಾಲಾ ಯೋಜನೆಯ ಆರಂಭಿಕ ಅಂದಾಜು ಮೊತ್ತ ರೂ. 329.76 ಲಕ್ಷ ಹಾಗೂ ಈ ಯೋಜನೆಗೆ ಇಲ್ಲಿಯವರೆಗೆ ತಗಲಿರುವ ಒಟ್ಟು ವೆಚ್ಚ ರೂ. 7142.07 ಲಕ್ಷ ಆಗಿರುತ್ತದೆ. 2. ಮುಲ್ಲಾಮಾರಿ ಯೋಜನೆಯ ಆರಂಭಿಕ ಅಂದಾಜು ಮೊತ್ತ

ರೂ.328.00 ಲಕ್ಷ ಹಾಗೂ ಈ ಯೋಜನೆಗೆ ಇಲ್ಲಿಯವರೆಗೆ ತಗಲಿರುವ ಒಟ್ಟು ವೆಚ್ಚ ರೂ. 2258.33 ಲಕ್ಷ ಆಗಿರುತ್ತದೆ. ಕಾರಂಜಾ ನೀರಾವರಿ ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಈಗ ಮುಗಿಯುವ ಹಂತದಲ್ಲಿರುತ್ತದೆ. ಈ ಯೋಜನೆಗೆ ಆರಂಭಿಕ ಅಂದಾಜು ಮೊತ್ತ ರೂ. 9.90 ಕೋಟಿ ಹಾಗೂ ಇಲ್ಲಿಯವರೆಗೆ ರೂ. 482.32 ಕೋಟಿ ವೆಚ್ಚ ಆಗಿರುತ್ತದೆ. ಮಾಂಜ್ರಾ ನದಿಗೆ ಅಡ್ಡಲಾಗಿ ನಾಲ್ಕು ಬ್ಯಾರೇಜುಗಳ ಪ್ರಾರಂಭಿಕ ಟೆಂಡರ್ ಮೊತ್ತ ರೂ.243.36 ಕೋಟಿಗಳಾಗಿದ್ದು, ಇಲ್ಲಿಯವರೆಗೆ ರೂ.112.93 ಕೋಟಿಗಳು ವೆಚ್ಚವಾಗಿರುತ್ತವೆ.

ಇ) ಈ ಯೋಜನೆಗಳಿಂದ ಜಿಲ್ಲೆಯ ಎಷ್ಟು ಎಕರೆ ಜಮೀನುಗಳಿಗೆ ನೀರಾವರಿ ಸೌಲಭ್ಯ ದೊರೆಯುವ ಬಗ್ಗೆ ಅಂದಾಜು ಮಾಡಲಾಗಿತ್ತು ಹಾಗೂ ಈಗ ಈ ಯೋಜನೆಗಳಿಂದ ಎಷ್ಟು ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರೆಯುತ್ತಿದೆ, ಅಂದಾಜು ಮಾಡಿದ್ದಕ್ಕಿಂತ ಕಡಿಮೆ ಪ್ರಮಾಣದಲ್ಲಿ ಈ ಸೌಲಭ್ಯ ದೊರೆಯುತ್ತಿರುವುದಕ್ಕೆ ಕಾರಣಗಳೇನು? (ಪ್ರತಿ ಯೋಜನೆಯ ಪೂರ್ಣ ವಿವರಗಳನ್ನು ಒದಗಿಸುವುದು).

ಬೀದರ್ ಜಿಲ್ಲೆಯಲ್ಲಿ ಈಗಾಗಲೇ ಪೂರ್ಣಗೊಂಡಿರುವ ಯೋಜನೆಗಳಾದ 1. ಚುಳಕಿನಾಲಾ ಯೋಜನೆಯಿಂದ ಒಟ್ಟು 4047 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಅಂದಾಜು ಮಾಡಲಾಗಿತ್ತು. ಈ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಮುಖ್ಯ ಕಾಲುವೆ, ವಿತರಣಾ ಕಾಲುವೆ ಹಾಗೂ ಹೊಲಗಾಲುವೆಗಳನ್ನು ನಿರ್ಮಾಣ ಮಾಡಲಾಗಿರುತ್ತದೆ. ಆದರೆ ಜಲಾಶಯದಲ್ಲಿ ಇಲ್ಲಿಯವರೆಗೆ ಅಲ್ಪ ಪ್ರಮಾಣದಲ್ಲಿ ನೀರು ಸಂಗ್ರಹಣೆಯಾಗಿರುತ್ತದೆ. ಈ ಅಲ್ಪ ಪ್ರಮಾಣದ ಸಂಗ್ರಹಣೆ ನೀರನ್ನು ಬಸವಕಲ್ಯಾಣ ಪಟ್ಟಣಕ್ಕೆ ಕುಡಿಯುವುದಗೋಸ್ಕರ ಬಳಸಿಕೊಳ್ಳಲಾಗಿರುತ್ತದೆ. 2. ಮುಲ್ಲಾಮಾರಿ ಮೇಲ್ದಂಡೆ ಯೋಜನೆಯಿಂದ ಒಟ್ಟು 3279 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಅಂದಾಜು ಮಾಡಲಾಗಿತ್ತು. ಈ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಮುಖ್ಯ ಕಾಲುವೆ ವಿತರಣಾ ಕಾಲುವೆ ಹಾಗೂ ಹೊಲಗಾಲುವೆಗಳನ್ನು ನಿರ್ಮಾಣ ಮಾಡಲಾಗಿರುತ್ತದೆ. ಹಾಗೂ ಜಲಾಶಯದಲ್ಲಿ ಪ್ರತಿ ವರ್ಷ ನೀರಿನ ಶೇಖರಣೆಗೆ ಅನುಗುಣವಾಗಿ ಹಾಗೂ ನೀರಾವರಿ ಸಲಹಾ ಸಮಿತಿಯ ನಿರ್ಧಾರದಂತೆ ಯೋಜನೆಯಡಿ ನೀರಾವರಿ ಸೌಲಭ್ಯ ಕಲ್ಪಿಸಲಾಗುತ್ತಿದೆ.

ಕಾರಂಜಾ ಯೋಜನೆ ಕಾಮಗಾರಿಗಳು ಪ್ರಗತಿಯಲ್ಲಿದ್ದು ಮುಕ್ತಾಯ ಹಂತದಲ್ಲಿರುತ್ತದೆ. ಈ ಯೋಜನೆಯಿಂದ ಒಟ್ಟು 35614 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಆರಂಭಿಕವಾಗಿ ಅಂದಾಜು ಮಾಡಲಾಗಿತ್ತು. ಆದರೆ ಈ ಯೋಜನೆಯಲ್ಲಿ ಈಗ ಒಟ್ಟು 29227 ಹೆ. ಪ್ರದೇಶಕ್ಕೆ ಮಾತ್ರ ನೀರಾವರಿ ಸೌಲಭ್ಯ ಕಲ್ಪಿಸಲು ಸಾಧ್ಯವಾಗುತ್ತಿದೆ. ಇದರಲ್ಲಿ ಈಗಾಗಲೇ 22793 ಹೇ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಸೃಷ್ಟಿಸಲಾಗಿದೆ. ಈಗಾಗಲೇ ಸುಮಾರು 20973 ಹೆ. ಪ್ರದೇಶಕ್ಕೆ ಹೊಲಗಾಲುವೆ ನಿರ್ಮಾಣ ಮಾಡಲಾಗಿರುತ್ತದೆ.

ಈ ಯೋಜನೆಯಲ್ಲಿ ಆರಂಭಿಕವಾಗಿ ಟೋಪೋ ಶೀಟನ್ನು ಅಳವಡಿಸಿ, ಪ್ಲಾನಿ ಮೀಟರ ವಿಧಾನದಿಂದ ಲೆಕ್ಕಾಚಾರ ಮಾಡಿ ಅಚ್ಚುಕಟ್ಟು ಪ್ರದೇಶದ ಕ್ಷೇತ್ರವನ್ನು 35614 ಹೆ. ಎಂದು ಅಂದಾಜಿಸಲಾಗಿತ್ತು. ಆದರೆ ಈಗ 30 ವರ್ಷಗಳು ಕಳೆದ ನಂತರ ಯೋಜನೆಯ ಅಚ್ಚುಕಟ್ಟು ಪ್ರದೇಶದಲ್ಲಿ ಅಚ್ಚುಕಟ್ಟು ರಸ್ತೆಗಳು ನಿರ್ಮಾಣ, ಕೆಲವು ಕೈಗಾರಿಕಾ ಸಂಸ್ಥೆಗಳ ನಿರ್ಮಾಣದಿಂದ ಹಾಗೂ ಇತರ ಕಾರಣಗಳಿಂದ ಮೂಲ ಅಂದಾಜು ಅಚ್ಚುಕಟ್ಟು ಪ್ರದೇಶ 35614 ಹೆ. ರಿಂದ ಈಗ ಯೋಜನೆಯ ಅಚ್ಚುಕಟ್ಟು ಪ್ರದೇಶ 29227 ಹೆ. ಆಗಿರುತ್ತದೆ.

ಕಾರಂಜಾ ಯೋಜನೆಯಲ್ಲಿ 2008ನೇ ಮುಂಗಾರು ಹಂಗಾಮಿಗಾಗಿ ಒಟ್ಟು 8022 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕೊಡಲಾಗಿರುತ್ತದೆ ಹಾಗೂ 2008 ಹಿಂಗಾರು ಹಂಗಾಮಿಯಡಿ 20,000 ಹೆ. ನೀರಾವರಿಗೆ ಅಧಿಸೂಚನೆ ಹೊರಡಿಸಲಾಗಿರುತ್ತದೆ. 2009 ಮುಂಗಾರು ಹಂಗಾಮಿಗಾಗಿ 19,812 ಹೆ. ನೀರಾವರಿಗಾಗಿ ನೀರನ್ನು ಹರಿಬಿಡಲಾಗುವುದು.

ಮಾಂಜ್ರಾ ನದಿಗೆ ಅಡ್ಡಲಾಗಿ ಬ್ಯಾರೇಜಿನ ನಿರ್ಮಾಣದಿಂದ 12,672 ಹೆ.ಪ್ರದೇಶಕ್ಕೆ ರೈತರು ತಾವೇ ಸ್ವತ: ಪಂಪ್‌ಸೆಟ್ ಬಳಸಿ ನೀರಾವರಿ ಸೌಲಭ್ಯ ಪಡೆಯುಬಹುದಾಗಿದೆ.

ಈ) ಜಿಲ್ಲೆಯ ಯಾವ ಯಾವ ನೀರಾವರಿ ಯೋಜನೆಯ ಕಾಮಗಾರಿಗಳಲ್ಲಿ ಭ್ರಷ್ಟಾಚಾರದ ಪ್ರಕರಣಗಳು ಪತ್ತೆಯಾಗಿವೆ. ಇದರಿಂದಾಗಿ ಸರ್ಕಾರಕ್ಕೆ ಆಗಿರುವ ನಷ್ಟವೆಷ್ಟು;; ಇದರಲ್ಲಿ ಭಾಗಿಯಾದವರುಗಳ ವಿವರಗಳೇನು; ಇವರುಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಕಾರಂಜಾ ಯೋಜನೆ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ 19 ಭ್ರಷ್ಟಾಚಾರದ ಪ್ರಕರಣಗಳು ಪತ್ತೆಯಾಗಿವೆ. (ವಿವರಗಳನ್ನು ಪ್ರತ್ಯೇಕವಾಗಿ ಲಗತ್ತಿಸಲಾಗಿದೆ)

ಉ) ಜಿಲ್ಲೆಯಲ್ಲಿ ಮಂದಗತಿಯಲ್ಲಿ ನಡೆಯುತ್ತಿರುವ ಕಾಮಗಾರಿಗಳನ್ನು ಚುರುಕುಗೊಳಿಸಿ ಶೀಘ್ರವಾಗಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ಕಾರಂಜಾ ಯೋಜನೆಯ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿರುತ್ತದೆ. 2007–08 ನೇ ಸಾಲಿನ ಕೊನೆಯಲ್ಲಿ 115ನೇ ಕಿಮೀ ಬಳಿ ಅಕ್ವಡಕ್ ಅನ್ನು ಪೂರ್ಣಗೊಳಿಸಿ 16,415 ಹೆ. ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿತ್ತು. ನಂತರ 2008–09ನೇ ಸಾಲಿನಲ್ಲಿ ಕಾರಂಜಾ ಯೋಜನೆಯಲ್ಲಿ ಮೊದಲನೇ ಬಾರಿಗೆ ಕಾಲುವೆಯಲ್ಲಿ ನೀರಾವರಿಗಾಗಿ ನೀರನ್ನು ಹರಿಬಿಡಲು ಉದ್ದೇಶಿಸಲಾಗಿ 127.3ನೇ ಕಿಮೀ. ಬಳಿ ಭಾರಿ ಅಕ್ವಡಕ್ಟ್ ಅನ್ನು ಪೂರ್ಣಗೊಳಿಸಲಾಗಿ ಕಿಮೀ. 128.51 ಬಳಿ ಇನ್ನೊಂದು ಭಾರಿ ಅಕ್ವಡಕ್ಟ್ ಕಾಮಗಾರಿಯನ್ನು ಬಹುತೇಕ ಪೂರ್ಣಗೊಳಿಸಲಾಗಿ, ಉಳಿದ ಕಾಮಗಾರಿಯನ್ನು 2009ನೇ ಸೆಪ್ಟೆಂಬರ್ ಅಂತ್ಯದಲ್ಲಿ

ಪೂರ್ಣಗೊಳಿಸಲಾಗುವುದು. ಒಟ್ಟಾರೆ ಬಲದಂಡೆ ಕಾಲುವೆಯನ್ನು ಪೂರ್ಣಗೊಳಿಸಿ 131ನೇ ಕಿಮೀ ವರೆಗೂ ನೀರನ್ನು ಹರಿಸಿ 19.217 ಹೆ. ನೀರಾವರಿ ಕಲ್ಪಿಸಬಹುದಾಗಿದೆ. ಇದೇ ಸಾಲಿನಲ್ಲಿ ಯೋಜನೆಯಲ್ಲಿ 6434 ಹೆ. ಪ್ರದೇಶಕ್ಕೆ ನೀರಾವರಿ ಸೃಷ್ಟಿಸುವ ಕಾಮಗಾರಿಗಳಾದ, 1) ಬಲದಂಡೆ ಕಾಲುವೆಯ ತುದಿ ವಿತರಣಾ ಕಾಲುವೆ 2) ಏತ ನೀರಾವರಿಯ ವಿತರಣಾ ಕಾಲುವೆ ಸಂ.ಡಿ-1(ಎ) ಹಾಗೂ 3) ಅತಿವಾಳ ಏತ ನೀರಾವರಿಯ ಕಾಮಗಾರಿಗಳನ್ನು ಎ.ಐ.ಬಿ.ಪಿ. ಸಹಾಯಧನ ಒದಗಿಸಿಕೊಂಡು ಕೈಗೊಳ್ಳಲು ಯೋಜಿಸಲಾಗಿದೆ.

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ(ಬಾಲ್ಕಿ), ವಿಧಾನ ಸಭಾ ಸದಸ್ಯರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 180ಕ್ಕೆ ಉತ್ತರ

ಅನುಬಂಧ

ಕ್ರ ಸಂ	ಪ್ರಕರಣ ಸಂಖ್ಯೆ	ಆರೋಪಿತ ಅಧಿಕಾರಿ/ನೌಕರರ ಹೆಸರು	ಸರ್ಕಾರಕ್ಕೆ ಆಗಿರುವ ನಷ್ಟದ ಮೊತ್ತ/ಸರ್ಕಾರ ತೆಗೆದುಕೊಂಡ ಕ್ರಮ
1	2	3	4
1.	137	ಶ್ರೀ ಸೈಯದ್ ಮಹಮೂದ್ ಹುಸೇನ್, ಕಾ.ಇಂ.(ನಿ)	2ನೇ ಕಾರಣ ಕೇಳುವ ನೋಟೀಸಿಗೆ ಸ್ವೀಕೃತವಾಗಿರುವ ಹೇಳಿಕೆಗಳನ್ನು ಒಪ್ಪದೇ ಅವರಿಗೆ ದಂಡನೆ ವಿಧಿಸುವ ಸಲುವಾಗಿ ಸರ್ಕಾರಕ್ಕೆ ಉಂಟಾದ ಆರ್ಥಿಕ ನಷ್ಟದ ಬಗ್ಗೆ ಸ್ಪಷ್ಟೀಕರಣವನ್ನು ಕೋರಿದೆ.
2.	188	ಶ್ರೀ ಹರಿಹರ ಸದಾಶಿವರಾವ್,ಕಾ.ಇಂ.,(ನಿ) ಶ್ರೀ ಪ್ರೇಮ್‌ಸಿಂಗ್, ಸ.ಕಾ.ಇಂ., ಶ್ರೀ ಎನ್.ಟಿ.ಕೋಳೇಕರ್, ಸ.ಕಾ.ಇಂ.,(ನಿ) ಶ್ರೀ ಎಂ.ಮಹ್ಮದ್ ಹುಸೇನ್, ಸ.ಇಂ., ಶ್ರೀ ಸಾಹೆದ ಆಲಿ, ಸ.ಇಂ., ಶ್ರೀ ಬಿ.ಎ.ತಮಸಂಗೆ, ಸ.ಇಂ., ಶ್ರೀ ಎಂ.ಡಿ.ಅಲರುಲ ಹಕ್ ಸಿದ್ದಿಕಿ,ಸ.ಇಂ. ಶ್ರೀ ಮಲ್ಲಿಕಾರ್ಜುನ ಕರಂಜಿ. ಸ.ಇಂ., ಶ್ರೀ ರಾಜೇಂದ್ರ, ಸ.ಇಂ., ಶ್ರೀ ಡಿ.ಆರ್.ಕುಲಕರ್ಣಿ, ಸ.ಇಂ., ಶ್ರೀ ಫಬ್ಬಾ ರವಿಕಿರಣ, ಸ.ಇಂ., ಶ್ರೀ ಶಫಿಯೋದ್ದೀನ್, ಸ.ಇಂ., ಶ್ರೀ ಕಲಿಮೋದ್ದೀನ್, ಕಿ.ಇಂ., ಶ್ರೀ ಅಶೋಕ್ ಕುಮಾರ, ಕಿ.ಇಂ.,	ಸರ್ಕಾರಿ ಆದೇಶ ಸಂ.ಜಸಂಇ/188/ಸೇಇವಿ/2004,ದಿ:25-04-08ರಲ್ಲಿ ಸದರಿಯವರ ಕರ್ತವ್ಯ ಲೋಪಕ್ಕಾಗಿ ದಂಡನೆಯನ್ನು ವಿಧಿಸಲಾಗಿದೆ.

		ಶ್ರೀ ವೈಜನಾಥ ಬರದಾಪೂರೆ, ಕೆ.ಇಂ., ಶ್ರೀ ಪಿ. ಬಸವರಾಜ್, ಕೆ.ಇಂ., ಶ್ರೀ ರಾಚಪ್ಪಾ ಪಾಟೀಲ್, ಕೆ.ಇಂ., ಶ್ರೀ ನವಾಬೋದ್ದೀನ್, ಕೆ.ಇಂ., ಶ್ರೀ ಪಾಂಡುರಂಗ, ಕೆ.ಇಂ., ಶ್ರೀ ರವೀಂದ್ರ, ಕೆ.ಇಂ., ಶ್ರೀ ಅರುಣ ಕುಮಾರ, ಕೆ.ಇಂ.,	
3.	192	ಶ್ರೀ ನಸರುಲ್ಲಾ ಖಾನ್, ಸ.ಕಾ.ಇಂ., ಶ್ರೀ ಎನ್.ಎ.ಶ್ರೀಪತರಾವ್, ಸ.ಕಾ.ಇಂ.,(ನಿ) ಶ್ರೀ ಅಶೋಕ ಡೋಯಿಜೋಡೆ,ಪ್ರದುಪಾ ಶ್ರೀ ಎನ್.ಎಸ್.ಪಾಟೀಲ್, ಸ.ಕಾ.ಇಂ., ಶ್ರೀ ದಯಾನಂದಸ್ವಾಮಿ, ಪ್ರದಉಪಾ ಶ್ರೀ ಗುಂಡಪ್ಪಾ ಮಾಡಗೋಳ, ಲೆಕ್ಕ ಪತ್ರ ಅಧಿಕಾರಿ	ರೂ.22.84 ಲಕ್ಷಗಳು ಸರ್ಕಾರಿ ಆದೇಶ ಸಂ.ಜಸಂಇ/192/ಸೇಇವಿ/2004ದಿ:12–05–08ರಲ್ಲಿ ಆರ್ಥಿಕ ನಷ್ಟದ ಮೊತ್ತ ವಸೂಲಿ ಮಾಡಲು ಹಾಗೂ ಅವರ ಕರ್ತವ್ಯ ಲೋಪಕ್ಕಾಗಿ ಸದರಿಯವರಿಗೆ ದಂಡನೆ ವಿಧಿಸಲಾಗಿದೆ.
4.	94	ಶ್ರೀ ಸುಧಾಕರ ಕುಲಕರ್ಣಿ, ಸಕಾಇಂ(ನಿ) ಶ್ರೀ ಖಾಜಾಮಸೂದ್ ಅಹ್ಮದ್,ಸಕಾಇಂ(ನಿ)	ರೂ.29,44ಲಕ್ಷಗಳು ಆರೋಪಿತರಿಂದ ಸರ್ಕಾರಕ್ಕೆ ಉಂಟಾದ ನಷ್ಟದ ಮೊತ್ತವನ್ನು ವಸೂಲಿ ಮಾಡುವ ದಂಡನೆ ವಿಧಿಸುವ ಬಗ್ಗೆ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಕೋರಲಾಗಿದೆ.
5.	83	ಶ್ರೀ ಬಸವರಾಜ ಸಲಗರ, ಸಕಾಇಂ(ನಿ) ಶ್ರೀ ಪಟ್ಟಣಕರ ಪಾಂಡುರಂಗ,ಸಇಂ(ನಿಧನ ಶ್ರೀ ಅಶೋಕ ಜೋಯಿಜೋಡೆ,ಪ್ರದುಪಾ ಶ್ರೀ ಮಹ್ಮದ್ ಖಾಜಾ, ಕಾ.ಗರ	ರೂ.2.41ಲಕ್ಷಗಳು ಸರ್ಕಾರಕ್ಕೆ ನಷ್ಟ ಉಂಟಾಗಿದ್ದು, ಸರ್ಕಾರದ ಅದೇ ಸಂ;ಜಸಂಇ/83/ಸೇಇವಿ/96(ಭಾ) ದಿ:4–6–08ರಲ್ಲಿ ಅವರುಗಳಿಂದ ವಸೂಲಿ ಮಾಡಲು ಹಾಗೂ ಕರ್ತವ್ಯ ಲೋಪಕ್ಕಾಗಿ ದಂಡನೆ ವಿಧಿಸಿದೆ. ಇವರುಗಳ ಮೇಲಿನ ಆರೋಪವು ಸಾಬೀತಾಗಿಲ್ಲದ ಕಾರಣ

		ಶ್ರೀ ಎಲ್.ಎ.ವಿಶ್ವನಾಥ, ಕಾ.ಗಾರ (ಈಗ ಕಲಿತ ಸಹಾಯಕರು) ಶ್ರೀ ಮನೋಹರ, ಕಾ.ಗಾರ ಶ್ರೀ ಅಬ್ದುಲ್ ಹಮೀದ್, ಕಾ.ಗಾರ. ಶ್ರೀ ಹಣಮಂತ, ಕಾ.ಗಾರ ಶ್ರೀ ಗಣಪತಿ, ಕಾ.ಗಾರ	ಆರೋಪದಿಂದ ದೋಷಮುಕ್ತನ್ನಾಗಿ ಮಾಡಲಾಗಿದೆ.
6	148	ಶ್ರೀ ಎನ್.ಎಲ್.ಮೇತ್ರಿ, ಸ.ಕಾ.ಇಂ.(ನಿ) ಶ್ರೀ ಪಿ.ಬಿ.ನಂದರೂ, ಸ.ಕಾ.ಇಂ.,(ನಿ) ಶ್ರೀ ಗುಣಶೀರ ಅಹ್ಮದ್, ಸ.ಕಾ.ಇಂ(ನಿ) ಶ್ರೀ ಶಂಕರೆಪ್ಪಾ ಸುರವಾರ, ಸ.ಕಾ.ಇಂ.,(ನಿ) ಶ್ರೀ ಎಸ್.ಜಿ.ಗುಗ್ಗವಾಡ,ಸ.ಕಾ.ಇಂ.(ನಿ) ಶ್ರೀ ಸಿ.ನಂಜೇಗೌಡ, ಸ.ಕಾ.ಇಂ, ಶ್ರೀ ಹರಿಹರ ಸದಾಶಿವರಾವ್,ಕಾಇ(ನಿ) ಶ್ರೀ ಎಸ್.ಯ.ಶಫಿ ಅಹ್ಮದ್,ಸಕಾಇಂ ಶ್ರೀ ಫಬ್ಬಾ ರವಿಕಿರಣ, ಸ.ಇಂ. ಶ್ರೀ ಲಕ್ಷ್ಮಣ, ಸಕಾಇಂ ಶ್ರೀ ಎಚ್.ಆರ್.ಕೃಷ್ಣಮೂರ್ತಿ,ಸಕಾಇಂ (ನಿ) ಶ್ರೀ ಎಸ್.ಕೆ.ಗಾಯತೊಮಡ,ಸಕಾಇಂ(ನಿ) ಶ್ರೀ ಬಿ.ಎಸ್.ಬಿರಾದಾರ, ಸ.ಇಂ. ಶ್ರೀ ಮೋಹನ ಬಾಚಾ, ಲೆ.ಪ.ಅಧಿಕಾರಿ ಶ್ರೀ ಗುಂಡಪೊಪಾ, ಲೆ.ಪ.ಅಧಿಕಾರಿ ಶ್ರೀ ವೀರಶೆಟ್ಟಿ, ಲೆ.ಪ.ಅಧಿಕಾರಿ	ರೂ.270.95 ಲಕ್ಷಗಳ್ಲಿ (1) ಸರ್ಕಾರದ ಆದೇಶ ಸಂ:ಜಸಂಇ/99 ದಿ:18–6–2008ರಂದು ವಿಚಾರಣಾಧಿಕಾರಿಯನ್ನು ನೇಮಕ ಮಾಡಿದೆ ದಿ:29–4–09ರಂದು ವಿಚಾರಣಾ ವರದಿ ಬಂದಿದೆ. (2) ಸರ್ಕಾರದ ಆದೇಶ ಸಂ:ಜಸಂಇ/148/ಸೇಇವಿ/99 ದಿ:18–6–2008ರಂದು ವಿಚಾರಣಾಧಿಕಾರಿಯನ್ನು ನೇಮಕ ಮಾಡಿದೆ (3) ಸರ್ಕಾರದ ಆದೇಶ ಸಂ:ಜಸಂಇ 148ಸೇಇವಿ99 ದಿ:18–6–2008ರಂದು ವಿಚಾರಣಾಧಿಕಾರಿಯನ್ನು ನೇಮಕ ಮಾಡಿದೆ

7	173	ಶ್ರೀ ಹರಿಹರ ಸದಾಶಿವರಾವ್,ಕಾ.ಇಂ(ನಿ) ಶ್ರೀ ಎಂ.ಎಸ್.ನಾಗರಾಜ್, ಕಾ.ಇಂ., ಶ್ರೀ ಸೂರ್ಯಕಾಂತ ಶೆಂದ್ರೆ, ಸ.ಇಂ. ಶ್ರೀ ವಿದ್ಯಾಸಾಗರ, ಸ.ಇಂ. ಶ್ರೀ ಸುಭಾಷ್ ಢಗೆ, ಕಿ.ಇಂ., ಶ್ರೀ ಅಣ್ಣೆಪ್ಪಾ, ಕಿ.ಇಂ., ವಿ.ಜಗನ್ನಾಥರಾವ್, ಲೆ.ಪ.ಅಧಿಕಾರಿ(ನಿ)	ಕರ್ತವ್ಯ ಲೋಪಕ್ಕಾಗಿ ವಿಚಾರಣೆ ನಡೆಸಲು ಸರ್ಕಾರದ ಆದೇಶ ಸಂಜಸಂಇ/173/ಸೇಇವಿ/2004 ದಿನಾಂಕ:27–10–2005ರಂದು ವಿಚಾರಣಾಧಿಕಾರಿಯನ್ನು ನೇಮಕ ಮಾಡಿದೆ ವಿಚಾರಣೆ ನಡೆಯುತ್ತಿದೆ.
8	38	ಶ್ರೀ ಅನಿಲ ಕುಮಾರ ಗರುಡಕರ್,ಸಕಾಇಂ ಶ್ರೀ ಎಸ್.ಎ.ಢ.ಗೆ, ಲೆ.ಪ.ಅಧಿಕಾರಿ(ಪ್ರಭಾರ)	ಕರ್ತವ್ಯ ಲೋಪಕ್ಕಾಗಿ ವಿಚಾರಣೆ ನಡೆಸಲು ಸರ್ಕಾರದ ಆದೇಶ ಸಂ:ಜಸಂಇ 38 ಸೇಇವಿ 2004 ದಿ:7–11–2005ರಲ್ಲಿ ವಿಚಾರಣಾಧಿಕಾರಿಗಳನ್ನು ನೇಮಕ ಮಾಡಿದೆ. ವಿಚಾರಣೆ ನಡೆಯುತ್ತಿದೆ.
9	89	ಶ್ರೀ ಬಸವರಾಜ ಹಾರಕುಡೆ, ಸ.ಇಂ. ಶ್ರೀ ರಾಮಚಂದ್ರ ಕಿ.ಇಂ.	ವಿಚಾರಣಾಧಿಕಾರಿಗಳು ವಿಚಾರಣೆ ನಡೆಸಿ ದಿ:23.7–2008ರಲ್ಲಿ ವಿಚಾರಣಾ ವರದಿ ಸಲ್ಲಿಸಿರುತ್ತಾರೆ. ವಿಚಾರಣಾ ವರದಿಯನ್ನು ಪರಿಶೀಲಿಸಿ ಆಪಾದಿತರಿಗೆ 2ನೇ ಕಾರಣ ಕೇಳುವ ನೋಟಿಸನ್ನು ಜಾರಿ ಮಾಡಿದೆ.
10	181	ಶ್ರೀ ಹರಿಹರ ಸದಾಶಿವರಾವ್,ಕಾಇಂ(ನಿ) ಶ್ರೀ ರಾಜುಡಾಂಗೆ, ಸ.ಕಾ.ಇಂ. ಶ್ರೀ ಎನ್.ಟಿ.ಕೋಳೇಕರ್, ಸ.ಇಂ.,	ವಿಚಾರಣಾಧಿಕಾರಿಗಳು ವಿಚಾರಣೆ ನಡೆಸಿ ವಿಚಾರಣಾ ವರದಿ ಸಲ್ಲಿಸಿರುತ್ತಾರೆ. ವಿಚಾರಣಾ ವರದಿಯನ್ನು ಪರಿಶೀಲಿಸಿ ಆಪಾದಿತರಿಗೆ 2ನೇ ಕಾರಣ ಕೇಳುವ ನೋಟಿಸನ್ನು ಜಾರಿ ಮಾಡಿದೆ. ಅಪಾದಿತರು ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ಪರಿಶೀಲನೆಯಲ್ಲಿದೆ.
11	185	ಶ್ರೀ ಕೆ.ಬಿ.ಶಂಕರನಾರಾಯಣ, ಮು.ಇಂ(ನಿ) ಶ್ರೀ ಬಿ.ಡಿ.ಪಾಂಡುರಂಗರಂಗರಾವ್,ಸೂ.ಇಂ(ನಿ) ಶ್ರೀ ಕೆ.ಹನುಮಂತಪ್ಪಾ, ಕಾ.ಇಂ.(ನಿ)	ರೂ.266.00 ಲಕ್ಷಗಳು ಇವರ ವಿರುದ್ಧ ಸಿವಿಲ್ ದಾವೆ ಹೂಡಲು ಪರಿಷ್ಕೃತ ಪ್ರಸ್ತಾವನೆಯನ್ನು ಕೋರಿದೆ.

		ಶ್ರೀ ವಿ.ಜಿ.ಖೇಣದ, ಕಾ.ಇಂ.,(ನಿ) ಶ್ರೀ ಸೈಯದ್ ಮಹಮೂದ ಹುಸೇನ್, ಕಾ.ಇಂ.(ನಿ) ಶ್ರೀ ಎಸ್.ಕೆ.ಗಾಯತೊಂಡ, ಸಕಾಇಂ(ನಿ)	
12	74	ಶ್ರೀ ಎಸ್.ಕ್ಯೂ.ಖಾದ್ರಿ, ಸ.ಇಂ., ಶ್ರೀ ಬಿ.ಎಲ್.ಚಂದ್ರ, ಸ.ಇಂ., ಶ್ರೀ ಬಿ.ಎಸ್.ಪಾಟೀಲ್, ಸಕ.ಇಂ. ಶ್ರೀ ನಾಗೇಶ ಮಂಠಾಳೆ, ಸ.ಇಂ., ಶ್ರೀ ವಿ.ಡಿ.ಪೂಜಾರಿ, ಕಿ.ಇಂ., ಶ್ರೀ ಹೆಚ್.ಜ್ಞಾನಪ್ರಕಾಶ್, ಪ್ರದಉಪಾ ಶ್ರೀ ದಯಾನಂದಸ್ವಾಮಿ, ಪ್ರದಉಪಾ ಶ್ರೀ ಚಂದ್ರಕಾಂತ, ಉ.ಪಾ. ಶ್ರೀ ವಿಶ್ವನಾಥ ಖಂಡ್ರೆ, ಉಪಾ ಶ್ರೀ ಶಾಂತವಿರ, ಪ್ರಭಾರ ಲೆಅ. ಶ್ರೀ ಸುಧಾಕರ ಕುಲಕರ್ಣಿ,ಸಕಾಇಂ(ನಿ) ಶ್ರೀ ಮುರಳಿಧರರಾವ್, ಸಕಾಇಂ ಶ್ರೀ ಟಿ.ಆರ್.ಪವಾರ್, ಸಕಾಇಂ(ಪ್ರಭಾರ) ಶ್ರೀ ಎಸ್.ಎ.ಶಫಿಅಹ್ಮದ್, ಸ.ಕಾ.ಇಂ., ಶ್ರೀ ಪುಂಡಲೀಕ್, ಸ.ಕಾ.ಇಂ., ಶ್ರೀ ಎಂ.ಎಸ್.ನಾಗರಾಜ, ಕಾಇಂ(ಪ್ರಭಾರ) ಶ್ರೀ ಮರಕುಂದೆ ಸುಭಾಷ್,ಕಾಇಂ,	ರೂ.82,14,514/– ಸರ್ಕಾರದ ಆದೇಶ ಸಂ:ಜಸಂಇ/74/ಸೇಇವಿ/07 ದಿ:13–1–2009ರಂದು ವಿಚಾರಣಾಧಿಕಾರಿಗಳನ್ನು ನೇಮಕ ಮಾಡಿದೆ. ವಿಚಾರಣೆ ಪ್ರಗತಿಯಲ್ಲಿದೆ.
13	21	ಶ್ರೀ ಬಿ.ಎಸ್.ಜವಳಿ, ಸೂ.ಇಂ.,(ನಿ)	ರೂ.31.79ಲಕ್ಷಗಳು ನಿವೃತ್ತ ಅಧಿಕಾರಿಗಳ ವಿರುದ್ದ ಸಿವಿಲ್ ದಾವೆಹೂಡಲು ಕ್ರಮಕೈಗೊಳ್ಳಲಾಗಿದೆ.

14	21	ಶ್ರೀ ಹೆಚ್.ಪುಂಡಲೀಕರಾವ್,ಕಾಇಂ(ನಿ) ಶ್ರೀ ಎಸ್.ಎ.ಶಫಿ ಅಹ್ಮದ್, ಕಾಇಂ(ನಿ) ಶ್ರೀ ಹರಿಹರಸದಾಶಿವರಾವ್, ಕಾಇಂ(ನಿ) ಶ್ರೀ ಸೈಯದ್ ಹುಸೇನ್,ಸಕಾಇಂ(ನಿ) ಶ್ರೀ ವಿ.ಕೆ.ಭಜಂತ್ರಿ, ಸ.ಇಂ.(ನಿ) ಶ್ರೀ ಹೆಚ್.ವಿ.ಪರಮೇಶ್ವರಯ್ಯ,ಕಾಇಂ(ನಿ) ಶ್ರೀ ಜೆ.ಸಿ.ಸುರಪುರ,ಕಾಇಂ,(ನಿ) ಶ್ರೀ ಜೆ.ಎಂ.ಸುರಪುರ,ಕಾಇಂ,(ನಿ) ಶ್ರೀ ಜಿ.ಎಂ.ಸದಾಶಿವಯ್ಯ, ಕಾಇಂ(ನಿ) ಶ್ರೀ ಹೆಚ್.ಪುಂಡಲೀಕ್, ಕಾಇಂ(ನಿ) ಶ್ರೀ ಬಿ.ಎಸ್.ಶಿರವಾಳ,ಸ.ಇಂ(ಮರಣ) ಶ್ರೀ ಎಂ.ಜಡ್, ಬಾಬರ, ಸಕಾಇಂ(ನಿ)	ರೂ.1,49,709/– ನಿವೃತ್ತ ಅಧಿಕಾರಿಗಳ ವಿರುದ್ಧ ಸಿವಿಲ್ ದಾವೆ ಹೂಡಲು ಕ್ರಮಕೈಗೊಳ್ಳಲಾಗಿದೆ.
15	187	ಶ್ರೀ ವಿ.ಜೆ.ಖೇಣೇದ, ಕಾ.ಇಂ.,(ನಿ) ಶ್ರೀ ಕೆ.ಹನುಮಂತಪ್ಪ, ಕಾ.ಇಂ.,(ನಿ) ಶ್ರೀ ಪಾಂಡುರಂಗ ಬಿರಾದಾರ,ಕಾಇಂ(ನಿ)	ರೂ.121.30ಲಕ್ಷಗಳು ಸಿವಿಲ್ ದಾವೆ ಹೂಡಲು ಸರ್ಕಾರಿ ವಕೀಲರನ್ನು ನೇಮಕ ಮಾಡಲಾಗಿದೆ.
16	157	ಶ್ರೀ ಹನುಮಂತಪ್ಪ, ಕಾಇಂ(ನಿ) ಶ್ರೀ ಪಾಂಡುರಂಗ, ಕಾಇಂ(ನಿ) ಶ್ರೀ ಜೆ.ಸಿ.ಸುರಪುರ, ಕಾಇಂ(ನಿ) ಶ್ರೀ ವಿ.ಹೆಚ್.ಅಗರಖೇಡ್,ಸೂಇಂ(ನಿ) ಶ್ರೀ ಸೈಯದ್ ಹುಸೇನ್,ಸಕಾಇಂ(ನಿ)	ರೂ.16.52ಲಕ್ಷಗಳು ಇವರ ವಿರುದ್ಧ ಸಿವಿಲ್ ದಾವೆ ಹೂಡಲು ಕ್ರಮಕೈಗೊಳ್ಳಲಾಗಿದೆ.

		ಶ್ರೀ ಸೂರ್ಯಕಾಂತ, ಸಕಾಇಂ(ನಿ)	
17	28	ಶ್ರೀ ವಿ.ಹೆಚ್.ಅಗರಖೇಡ್.,ಸೂಇಂ(ನಿ) ಶ್ರೀ ಎಸ್.ಕೆ.ದೇಸಾಯಿ, ಕಾಇಂ(ನಿ) ಶ್ರೀ ಕೆ.ದಿನಕರರಾವ್, ಸೂ.ಇಂ(ನಿ) ಶ್ರೀ ವೆಂಕಟರೆಡ್ಡಿ, ಕಾಇಂ(ನಿ) ಶ್ರೀ ಎಂ.ಡಿ.ಸದಾಶಿವಯ್ಯ,ಕಾಇಂ(ನಿ) ಶ್ರೀ ಪಿ.ಸಿದ್ದಪ್ಪ, ಕಾಇಂ,(ನಿ) ಶ್ರೀ ಬಿ.ಶಂಕರಪ್ಪ, ಸಕಾಇಂ(ನಿ) ಶ್ರೀ ಕೆ.ಹನುಮಂತಪ್ಪ, ಕಾಇಂ(ನಿ) ಶ್ರೀ ಹೆಚ್.ಮಂಡಲೀಕರಾವ್, ಕಾ.ಇಂ(ನಿ) ಶ್ರೀ ಎಸ್.ಕೆ.ಗಾಯತೊಂಡ,ಕಾಇಂ(ನಿ)	ಸರ್ಕಾರದ ಆದೇಶ ಸಂ:ಜಸಂಇ/364/ಸೇಇವಿ/2004 ದಿ:27–10–2007ರಲ್ಲಿ ವಿಚಾರಣಾ ವರದಿಯನ್ನು ಒಪ್ಪಿ ಸರ್ಕಾರವು ಅವರುಗಳನ್ನು ಅವರುಗಳ ಮೇಲೆ ಆರೋಪದಿಂದ ದೋಷಮುಕ್ತನ್ನಾಗಿ ಮಾಡಲಾಗಿದೆ.
18	181	ಶ್ರೀ ವಿ.ಕೆ.ಭಜಂತ್ರಿ ಸಕಾಇಂಅ(ನಿ) ಶ್ರೀ ಕೆ.ಎಸ್.ನಂದಕೂಮಾರ್, ಕಾಇಂ(ನಿ) ಶ್ರೀ ಎಂ.ಡಿ.ಭಜಂತ್ರಿ, ಕಾಇಂ(ನಿ) ಶ್ರೀ ಎಸ್.ರಾಮಚಂದ್ರ, ಕಾಇಂ(ನಿ) ಶ್ರೀ ಎಂ.ಬಿ.ಮುದಿಯಪ್ಪನವರ್,ಕಾಇಂ(ನಿ) ಶ್ರೀ ವೈಜನಾಥ ಚಿಮಕೋಡ,ಕಾಇಂ(ನಿ) ಶ್ರೀ ವಿ.ಹೆಚ್.ಅಗರ್ಖೇಡ್,ಕಾಇಂ(ನಿ) ಶ್ರೀ ಎಂ.ಬಿ.ವೆಂಕಟರೆಡ್ಡಿ,ಕಾಇಂ(ನಿ) ಶ್ರೀ ಬಿ.ಎಸ್.ಬಂತೂರ, ಸಕಾಇಂ(ನಿ) ಶ್ರೀ ಜಿ.ನಾರಾಯಣರಾವ್,ಸಕಾಇಂ(ನಿ) ಶ್ರೀ ವಿ.ವೆಂಕಟೇಶ್, ಸಕಾಇಂ(ನಿ)	ನಿವೃತ್ತ ಅಧಿಕಾರಿಗಳ ವಿರುದ್ಧ ಸಿವಿಲ್ ದಾವೆ ಹೂಡಲು ಪ್ರಸ್ತಾವನೆಯ ಬಂದಿದೆ.

		ಶ್ರೀ ಎನ್.ಎಲ್.ಮೇತ್ರಿ, ಸಕಾಇಂ(ನಿ) ಶ್ರೀ ಪಿ.ಬಿ.ನಂದೂರ, ಸಕಾಇಂ(ನಿ) ಶ್ರೀ ಶೇಖ್ ಆಲಿ, ಸಕಾಇಂಸ(ನಿ)	
19	182	ಶ್ರೀ ಎಂ.ಬಿ.ಮುದಿಯಪ್ಪನವರ್,ಸೂಇಂ(ನಿ) ಶ್ರೀ ಬಿ.ಆರ್.ಬಿದರಿ, ಸೂ.ಇಂ(ನಿ) ಶ್ರೀ ಸಿದ್ರಾಮಪ್ಪಾ, ಸೂ.ಇಂ(ನಿ) ಶ್ರೀ ಸೈಯದ್ ಮಹಮೂದ್ ಹುಸೇನ್, ಪ್ರಭಾರಿ ಸೂ.ಇಂ.(ನಿ) ಶ್ರೀ ಕೆ.ದಿನಕರರಾವ್, ಸೂಇಂ(ನಿ) ಶ್ರೀ ವಿ.ಹೆಚ್.ಅಗರ್‌ಖೇಡ್, ಕಾಇಂ(ನಿ)	ಇವರ ವಿರುದ್ಧ ಸಿವಿಲ್ ದಾವೆ ಹೂಡಲು ಸರ್ಕಾರಿ ವಕೀಲರನ್ನು ನೇಮಕ ಮಾಡಲಾಗಿದೆ.